OS No : 88/2019

P.W-1

**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ**

ದಿನಾಂಕಃ 14.11.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ 1 ರಿಂದ 9 ಮತ್ತು 11 ನೇ ಪ್ರತಿವಾದಿ ಪರ ವಕೀಲರಿಂದ**

ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಗಳು ನಮ್ಮ ಅಜ್ಜಿಯ ಹೆಸರಿನಲ್ಲಿದ್ದವು. ನನ್ನ ಅಜ್ಜಿಯ ಹೆಸರು ಹನುಮವ್ವ. ದಾವಾ ಅನುಸೂಚಿ-3 ರ ಆಸ್ತಿಯೂ ದಾವೆ ಹೂಡುವ ಕಾಲಕ್ಕೆ ದಾಸರ ಶಾಂತಮ್ಮ ರವರ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಆಸ್ತಿಯ ಕಂದಾಯ ದಾಖಲೆಗಳಲ್ಲಿ ನನ್ನ ತಾಯಿಯ ಹೆಸರು ಹೇಗೆ ಬಂದಿದೆ ಎಂಬುವುದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಯಾರು ಸ್ವಾಧೀನಾನುಭವದಲ್ಲಿದ್ದಾರೆ ಎಂಬುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಈ ಹಿಂದೆ ಆದ ವಿಭಾಗ ಪತ್ರದ ಆಧಾರದ ಮೇಲೆ ಪ್ರತ್ಯೇಕವಾಗಿದ ಹಿಸ್ಸೆಗಳಿಗೆ ಅವರವರೇ ಕಂದಾಯ ಕಟ್ಟುತ್ತಾ ಬಂದಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕು ಬಂದಿಯನ್ನು ಹೇಳಲು ನನಗೆ ಗೊತ್ತಾಗುವುದಿಲ್ಲ. ತಮ್ಮ-ತಮ್ಮ ಭಾಗಕ್ಕೆ ಬಂದಂತಹ ಆಸ್ತಿಗಳನ್ನು ಕೆಲವರು ಮಾರಾಟವನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.271/ಬಿ ಆಸ್ತಿಯನ್ನು ಹನುಮವ್ವ ಅಲಿಯಾಸ್ ಸಿದ್ಧಮ್ಮ ರವರು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿ-1 ರಿಂದ 11 ರವರು ತಮ್ಮ ಭಾಗಕ್ಕ ಬಂದಂತಹ ಆಸ್ತಿಗಳಲ್ಲಿ ಬ್ಯಾಂಕ್ ನಿಂದ ಸಾಲವನ್ನು ಸಹ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ-7 ರ ಆಸ್ತಿಯಲ್ಲಿ ಸರ್ವೆ ನಂ.270/2 ರ ವಿಸ್ತೀರ್ಣ 3 ಎಕರೆ 22 ಸೆಂಟ್ಸ್ ಮತ್ತು ಸರ್ವೆ ನಂ.251/ಬಿ ರ ವಿಸ್ತೀರ್ಣ 1 ಎಕರೆ 38 ಸೆಂಟ್ಸ್ ನನ್ನ ತಾಯಿಯ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಈಗಾಗಲೇ ದಿನಾಂಕ 12.10.1995 ರಂದು ಪಾಲು ವಿಭಾಗ ಆಗಿದ್ದು ಅದರಂತೆ ನನ್ನ ತಾಯಿಗೆ ಕೆಲವು ಆಸ್ತಿಗಳು ಬಂದಿರುವುದರಿಂದ ನಾನು ಮತ್ತು ಪಾಲು ವಿಭಾಗದಲ್ಲಿ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ**